**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No.491/2023**

**PW-1**

**ಪಾಟೀ ಸವಾಲುಃ ಆರೋಪಿ ಪರ ARP ವಕೀಲರಿಂದ.**

ದೂರಿನಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುತ್ತವೆ. ದೂರಿನಲ್ಲಿ ನನಗೆ ಖಾಸಗಿ ದೂರನ್ನು ದಾಖಲಿಸುವಂತೆ ನಿರ್ದೇಶಿಸಿರುವ ಅಂಶವನ್ನು ನಮೂದಿಸಿರುವುದಿಲ್ಲ. ಖಾಸಗಿ ದೂರನ್ನು ದಾಖಲಿಸುವಂತೆ ಮೇಲಾಧಿಕಾರಿಗಳು ಸೂಚಿಸಿರುತ್ತಾರೆ, ಆದರೆ ಸದರಿ ಮೇಲಾಧಿಕಾರಿಗಳ ಹುದ್ದೆಯನ್ನು ನನಗೆ ಹೇಳಲು ಬರುವುದಿಲ್ಲ. ಮೇಲಾಧಿಕಾರಿಗಳು ಪ್ರಕರಣ ದಾಖಲಿಸುವಂತೆ ನೀಡಿದ ದಾಖಲೆಯನ್ನು ನ್ಯಾಯಾಲಯಕ್ಕೆ ದೂರಿನೊಂದಿಗೆ ದಾಖಲಿಸಿರುತ್ತೇನೆ. ಆರೋಪಿ 1 ಮಲ್ಲೇಶ ಇಂಡಿಯಾ ಫೆಸ್ಟಿಸೈಡ ಲಿಮಿಟೆಡನ ಏಜೆಂಟ್ ಆಗಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ ಮಲ್ಲೇಶ ಕ್ರಿಮಿನಾಶಕ ತಯಾರಿಸುವ ವ್ಯಕ್ತಿ ಆಗಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಕ್ರಿಮಿನಾಶಕ ತಯಾರಿಸುವ ಕಂಪನಿಗೆ ಸಂಬಂಧಿಸಿದ ವ್ಯಕ್ತಿ ಆಗಿರುತ್ತಾನೆ. ಮೋನೊಕ್ರೋಟೋಫಾಸ ಕ್ರಿಮಿನಾಶಕವನ್ನು ಇಂಡಿಯಾ ಫೆಸ್ಟಿಸೈಡ ಕಂಪನಿ ತಯಾರಿಸುತ್ತದೆ ಎಂದರೆ ಸರಿ. 2 ನೇ ಆರೋಪಿ ಶ್ರೀಧರ ಇವರು ಕ್ರಿಮಿನಾಶಕವನ್ನು ಕಂಪನಿಯಿಂದ ಖರೀದಿಸಿ ನಮ್ಮ ಇಲಾಖೆಗೆ ನೀಡುತ್ತಾರೆ ಎಂದರೆ ಸರಿ. 1 ನೇ ಆರೋಪಿ ನಮ್ಮ ಇಲಾಖೆಗೆ ಯಾವುದೇ ಕ್ರಿಮಿನಾಶಕ ನೀಡಿರುವುದಿಲ್ಲ ಹಾಗೂ ನಮ್ಮ ಇಲಾಖೆಗೆ ಆತನು ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ. 1 ನೇ ಆರೋಪಿತನು ಸದರಿ ಕ್ರಿಮಿನಾಶಕವನ್ನು ನೇರವಾಗಿ ರೈತರಿಗೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿ. 2 ನೇ ಆರೋಪಿ ಶ್ರೀಧರ ಕಂಪನಿಯಿಂದ ಪೆಸ್ಟಿಸೈಡ ಖರೀದಿ ಟೆಂಡರ ಮೂಲಕ ನಮ್ಮ ಇಲಾಖೆಗೆ ನೀಡುತ್ತಿರುವ ಬಗ್ಗೆ ದೂರಿನಲ್ಲಿ ನಮೂದಿಸಿರುತ್ತೇನೆ. ಸದರಿ ಟೆಂಡರ ದಿನಾಂಕ ಮತ್ತು ಅದರ ಮೌಲ್ಯ ಹಾಗೂ ಯಾವ ತಾರೀಕಿನಂದು ಕ್ರಿಮಿನಾಶಕ ವಿತರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 2 ನೇ ಆರೋಪಿ ಕಂಪನಿಯ ಪ್ರತಿನಿದಿಯಾಗಿರುತ್ತಾರೆ ಎಂದು ನನ್ನ ದೂರಿನಲ್ಲಿ ನಮೂದಿಸಿರುತ್ತೇನೆ. ಸದರಿ ಎಂ ಎಸಿ ಗ್ರೀನಫೀಲ್ಡ ಕಂಪನಿ ಯಾರಿಗೆ ಸೇರಿರುತ್ತದೆ ಎಂಬುದು ನನಗೆ ಗೊತ್ತಿರುವುದಿಲ್ಲ.

ದೂರಿನಲ್ಲಿ ಕ್ರೊಟೆಕ್ಸದಲ್ಲಿ 36 ಪ್ರತಿಶತ ಮೋನೊಕ್ರೋಟೋಫಾಸ ಇರಬೇಕಾಗಿದ್ದು , ಮಾಧರಿಯನ್ನು ಪರೀಕ್ಷಿಸಿದಾಗ ಕಳಪೆ ಮಟ್ಟದ್ದು ಇದೇ ಎಂದು ದೂರಿನಲ್ಲಿ ನಮೂದಿಸಿರುತ್ತೇನೆ. ಕೇಂದ್ರ ಸರ್ಕಾರದಂತೆ 34.2 ರಿಂದ 37.8 ರ ವರೆಗೆ ಇರಬೇಕಾಗಿರುತ್ತದೆ, ಆದರೆ 32.19 ಬಂದಿರುತ್ತದೆ ಎಂಬುದನ್ನು ನನ್ನ ದೂರಿನೊಂದಿಗೆ ಲಗತ್ತಿಸಿದ ದಾಖಲೆಗಳಲ್ಲಿ ಇರುತ್ತದೆ. ಅಮಾನತ್ತು ಪಡಿಸಿಕೊಂಡಿರುವ ಕ್ರೋಟೆಕ್ಸ ಕ್ರಿಮಿನಾಶಕ 2019 ರಲ್ಲಿ ತಯಾರಿಕಾ ವರ್ಷವಾಗಿದ್ದು 2021 ರಲ್ಲಿ ಎಕ್ಸಪಾರಿಂಗ ವರ್ಷ ಆಗಿರುತ್ತದೆ , ಆದರೆ ನಿಖರವಾದ ದಿನಾಂಕ ಮತ್ತು ತಿಂಗಳು ಹೇಳಲು ಬರುವುದಿಲ್ಲ. ಸದರಿ ಎಕ್ಸಪಾಯರಿ ದಿನಾಂಕವನ್ನು ನನ್ನ ದೂರಿನಲ್ಲಿ ನಮೂದಿಸಿರುವುದಿಲ್ಲ ಆದರೆ

ದೂರಿನೊಂದಿಗೆ ಲಗತ್ತಿಸಿದ ದಾಖಲೆಗಳಲ್ಲಿ ಇರುತ್ತದೆ. ರೈತ ಸಂಪರ್ಕ ಕೇಂದ್ರದಲ್ಲಿ ಪಂಚನಾಮೆ ಮಾಡುವ ಕಾಲಕ್ಕೆ ಶಿವಶಂಕರ ಮತ್ತು ಮಲ್ಲಪ್ಪ ಹಾಜರಿದ್ದರು.

ಸದರಿ ರೈತ ಸಂಪರ್ಕ ಕೇಂದ್ರದಲ್ಲಿ ಸಹಾಯಕ ಕೃಷಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ. ಸದರಿ ಕ್ರಿಮಿನಾಶಕವು ನಮ್ಮ ರೈತ ಸಂಪರ್ಕ ಕೇಂದ್ರಕ್ಕೆ ಯಾರ ಮೂಲಕ ಯಾವ ಕಂಪನಿಯಿಂದ ಸರಬರಾಜು ಆಗಿರುತ್ತದೆ ಎಂಬ ದಾಖಲೆಗಳನ್ನು ದೂರಿನೊಂದಿಗೆ ನೀಡಿರುತ್ತೇನೆ. ಸದರಿ ಕ್ರಿಮಿನಾಶಕ ನಮ್ಮ ಕೇಂದ್ರಕ್ಕೆ ಯಾವ ಟೆಂಡರ್ ಮೂಲಕ ಬಂದಿರುತ್ತದೆ ಎಂಬ ಅಂಶವನ್ನು ನಮ್ಮ ದೂರಿನಲ್ಲಿ ನಿಖರವಾಗಿ ನಮೂದಿಸಿರುವುದಿಲ್ಲ. ಸದರಿ ಕ್ರಿಮಿನಾಶಕ ಉಪಯೋಗದಿಂದ ಹಾನಿ ಆಗಿರುತ್ತದೆ ಎಂದು ರೈತರು ನಮ್ಮ ಸಂಪರ್ಕ ಕೇಂದ್ರಕ್ಕೆ ಯಾವುದೆ ದೂರನ್ನು ನೀಡಿರುವುದಿಲ್ಲ. ಸದರಿ ಕ್ರಿಮಿನಾಶಕವನ್ನು ರೈತರಿಗೆ ನಮ್ಮ ಸಂಪರ್ಕ ಕೇಂದ್ರದಿಂದ ವಿತರಣೆ ಆಗಿರುತ್ತದೆ. ಎಷ್ಟು ಕ್ರಿಮಿನಾಶಕ ವಿತರಣೆ ಆಗಿರುತ್ತದೆ ಎಂದು ಕೇಂದ್ರದಲ್ಲಿ ಮಾಹಿತಿ ಇರುತ್ತದೆ , ನನಗೆ ಈಗ ಹೇಳಲು ಬರುವುದಿಲ್ಲ. ಸದರಿ ಕ್ರಿಮಿನಾಶಕದಲ್ಲಿ ಮೋನೊಕ್ರೋಟೋಫಾಸ ಪ್ರಮಾಣ ಕಡಿಮೆ ಇದ್ದ ಬಗ್ಗೆ ನಮ್ಮ ಮೇಲಾಧಿಕಾರಿಗಳಿಗೆ ಗೊತ್ತಿರುತ್ತದೆ. ಮೇಲಾಧಿಕಾರಿಗಳಿಂದ ವಾರ್ಷಿಕ ಇಂತಿಷ್ಟು ಪ್ರಕರಣಗಳನ್ನು ದಾಖಲಿಸುವಂತೆ ನಮಗೆ ಸೂಚಿಸಿರುತ್ತಾರೆ ಎಂದರೆ ಸರಿಯಲ್ಲ. ಕ್ರಿಮಿನಾಶಕ ಸಿಂಪಡನೆಯಿಂದ ಬೆಳೆ ನಾಶವಾಗಿರುವುದನ್ನು ನಾವು ಖುದ್ದು ಜಮೀನಿಗೆ ಹೋಗಿ ಪರಿಶೀಲನೆ ಮಾಡಿರುವುದಿಲ್ಲ ಎಂದು ಮೊದಲು ನುಡಿದು ನಂತರ ಪರಿಶೀಲನೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಪರಿಶೀಲಿಸಿದಾಗ ಬೆಳೆಗೆ ಯಾವುದೇ ಹಾನಿ ಆಗಿರುವುದಿಲ್ಲ. ಯಾರ ಜಮೀನಿಗೆ ಹೋಗಿ ಪರಿಶೀಲನೆ ಮಾಡಿರುತ್ತೇನೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ ಮತ್ತು ದೂರಿನಲ್ಲಿ ನಮೂದಿಸಿರುವುದಿಲ್ಲ. ಆರೋಪಿತರ ವಿರುದ್ಧ ಮೇಲಾಧಿಕಾರಿಗಳ ಮಾತು ಕೇಳಿ ಕಚೇರಿ ಅಂಕಿ ಸಂಖ್ಯೆಗಳಿಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು , ಕಾಲವಕಾಶ ನೀಡಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.